**ಕರ್ನಾಟಕ ಸರ್ಕಾರ**

**ಸಹ ನಿರ್ದೇಶಕರು-1 ಬೆಂಗಳೂರು ವಿಭಾಗ,, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560 001**


ಸಂಖ್ಯೆ: ವಾಶಾ/ಮಾ.ನ.1/2016-17 ದಿನಾಂಕ: 27/02/2017.

# ಸುತ್ತೋಲೆ

ವಿಷಯ: ವಿಭಾಗೀಯ ಸಹನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನೋಂದಣಿ ಮತ್ತು ಮಾನ್ಯತೆ ಪಡೆದ ವಾಣಿಜ್ಯ ಮತ್ತು ಗಣಕಯಂತ್ರ ಶಾಲೆಗಳು ಮಾನ್ಯತೆ ನವೀಕರಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ4/ಎಲ್.ಸಿ.ಇ 2002 ದಿನಾಂಕ: 21/05/2007 ತಿದ್ದುಪಡಿ ಆದೇಶ ದಿನಾಂಕ: 12/03/2008.

2. ಸರ್ಕಾರದ ಆದೇಶ ಸಂಖ್ಯೆ: ಇಡಿ 135/ಎಸ್.ಒ.ಹೆಚ್ 2011 ಬೆಂಗಳೂರು ದಿನಾಂಕ 28/05/2013.

3. ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಸಾ.ಶಿ.ಇ ಬೆಂಗಳೂರು ರವರ ಸಂಖ್ಯೆ; ವಾಶಿ/ಇತರೆ 43/2015-16 ದಿನಾಂಕ: 16/01/2017.

---------

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1, ಸರ್ಕಾರದ ಸುತ್ತೋಲೆಯಂತೆ ರಾಜ್ಯದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಹೊಸ ನೋಂದಣಿ ಮತ್ತು ಮಾನ್ಯತೆ ಪಡೆದಿರುವ ಎಲ್ಲಾ ವಾಣಿಜ್ಯ ಶಾಲೆಗಳಿಗೆ 5 ವರ್ಷಗಳ ಮಾನ್ಯತೆ ನವೀಕರಣ ನೀಡಲು ಆದೇಶಿಸಲಾಗಿದ್ದು, ಅದರಂತೆ ಬೆಂಗಳೂರು ವಿಭಾಗಕ್ಕೆ ಸಂಬಂಧಪಟ್ಟಂತೆ ಪ್ರಸ್ತಾವನೆಗಳನ್ನು ಸಲ್ಲಿಸಲ್ಪಟ್ಟ ವಾಣಿಜ್ಯ ಶಾಲೆಗಳಿಗೆ 2013-14 ರಿಂದ 5 ವರ್ಷಗಳ ಮಾನ್ಯತೆ ನವೀಕರಣ ನೀಡಲಾಗಿದೆ. ಸದರಿ ವಾಣಿಜ್ಯ ಶಾಲೆಗಳು ಮಾನ್ಯತೆ ನವೀಕರಣ ಪಡೆದ 5 ವರ್ಷಗಳ ಅವಧಿ ಪೂರ್ಣಗೊಳ್ಳುವುದಕ್ಕೆ 1 ತಿಂಗಳ ಮುಂಚಿತವಾಗಿ ಇಲಾಖೆಗೆ ನಮೂನೆ-7 ರಲ್ಲಿ ಮಾನ್ಯತೆ ನವೀಕರಣ ಕೋರಿ ಪ್ರಸ್ತಾವನೆ ಸಲ್ಲಿಸಲು ತಿಳಿಸಿದೆ.

ಉಲ್ಲೇಖ-2ರ ಸರ್ಕಾರದ ಆದೇಶದಂತೆ ಬೆಂಗಳೂರು ವಿಭಾಗದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ವಾಣಿಜ್ಯ ಶಾಲೆಗಳು ಮತ್ತು ಖಾಸಗಿ ವ್ಯಕ್ತಿಗಳು ಹೊಸದಾಗಿ ಗಣಕ ಯಂತ್ರ ಶಾಲೆ ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಅಂತಹ ಶಾಲೆಗಳಿಗೆ ಹೊಸದಾಗಿ ನೋಂದಣಿ ನೀಡಿದ ನಂತರ 3 ವರ್ಷಗಳ ಅವಧಿಗೆ ಪ್ರಥಮ ಮಾನ್ಯತೆಗಳನ್ನು ನೀಡಲಾಗಿದೆ. ಉಲ್ಲೇಖ-3ರ ನಿರ್ದೇಶನದಂತೆ, ಸದರಿ ಶಾಲೆಗಳು ಪ್ರಥಮ ಮಾನ್ಯತೆ ಪಡೆದ 3 ವರ್ಷಗಳ ಅವಧಿ ಪೂರ್ಣಗೊಳ್ಳುವುದಕ್ಕೆ ಮುಂಚೆ ರೂ 1000/- ಗಳ ಡಿ.ಡಿ ಯನ್ನು ನೋಂದಣಾಧಿಕಾರಿಗಳ ಹೆಸರಿಗೆ ಡಿ.ಡಿಯನ್ನು ಪಡೆದು ಮಾನ್ಯತೆ ನವೀಕರಣ ಕೋರಿ ನಮೂನೆ-7 ರಲ್ಲಿ ಕೆಳಕಂಡ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ.

1. ಇಲಾಖೆಯಿಂದ ನೋಂದಣಿ ಮಾನ್ಯತೆ ಪಡೆದ ನಂತರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪಡೆದ ಶಾಲಾ ಸಂಕೇತದ ಪ್ರತಿ
2. ಮೂರು ವರ್ಷಗಳ ವಾಣಿಜ್ಯ ಮತ್ತು ಗಣಕ ಯಂತ್ರ ಶಿಕ್ಷಣದ ಪರೀಕ್ಷಾ ಫಲಿತಾಂಶಗಳ ಪಟ್ಟಿಯ ಪ್ರತಿ
3. ಇಲಾಖೆಯಿಂದ ಅನುಮೋದನೆ ಪಡೆದ ಪ್ರಾಂಶುಪಾಲರ ಮತ್ತು ಬೋಧಕರ ಹೆಸರು
4. ಹೊಸದಾಗಿ ಬೋಧಕರ ನೇಮಕ ಮಾಡಿಕೊಂಡಿದ್ದಲ್ಲಿ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಅನುಮೋದನೆ ಪಡೆಯತಕ್ಕದ್ದು.
5. ಸರ್ಕಾರ ಮತ್ತು ಇಲಾಖೆಯಿಂದ ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
6. ಮಾಲೀಕತ್ವ ಬದಲಾಣೆ/ಸ್ಥಳಾಂತರ ಮಾಡಿಕೊಳ್ಳಬಯಸಿದ್ದಲ್ಲಿ ಮುಂಚಿತವಾಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು.
7. ಶಾಲೆಗಳನ್ನು ಮುಚ್ಚಲು ಇಚ್ಛಿಸಿದಲ್ಲಿ ಇಲಾಖೆಗೆ ತಿಳಿಸಿ ಅನುಮತಿ ಪಡೆಯತಕ್ಕದ್ದು.

ಮೇಲ್ಕಂಡಂತೆ ನಿಯಮಗಳನ್ನು ಪಾಲಿಸತಕ್ಕದ್ದು, ಅವಧಿ ಮೀರಿ ಬಂದ ಪ್ರಸ್ತಾವನೆಯನ್ನು ಪರಿಗಣಿಸುವುದಿಲ್ಲವೆಂಬ ಅಂಶಗಳನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಸಹನಿರ್ದೇಶಕರು-1
ಬೆಂಗಳೂರು ವಿಭಾಗ

ಗೆ:

1] ಬೆಂಗಳೂರು ವಿಭಾಗದ ಎಲ್ಲಾ ನೋಂದಣಿ ಮತ್ತು ಮಾನ್ಯತೆ ಪಡೆದ ವಾಣಿಜ್ಯ ಶಾಲೆಗಳು ಮತ್ತು ಗಣಕ ಯಂತ್ರ ಶಾಲೆಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:

1] ನಿರ್ದೇಶಕರು(ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ರವರ ಅವಗಾಹನೆಗಾಗಿ ಮತ್ತು ಮಾಹಿತಿಗಾಗಿ

2] ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

E:\Commerce\Commerce Suttole.doc

3] ಅಧ್ಯಕ್ಷರು, ಕರ್ನಾಟಕ ವಾಣಿಜ್ಯ ಶಾಲೆಗಳ ಸಂಘ, ನಂ.20, ಶ್ರೀ ಜಯಲಕ್ಷ್ಮಿ ಅಪಾರ್ಟ್‌ಮೆಂಟ್, ಮಹಮದನ್ ಬ್ಲಾಕ್, ಮಲ್ಲೇಶ್ವರಂ, ಬೆಂಗಳೂರು-3